ಯು ಶುಡ್ ಗೋ' ಎಂದು ನನ್ನ ಮುಂಗೈಗೆ ಆತನ ಕೈಯಿಂದ ಪಟ್ ಎಂದು ಹೊಡೆದ. ಆತನ ಮುಂಗೈ, ಮಣಿಕಟ್ಟು, ಬೆರಳುಗಳು ಇಂಡಿಪೆಂಡೆಂಟಾಗಿ ಯಾವುದೋ ನಾಟ್ಯದ ಮುದ್ರೆಯಂತೆ ಬಳುಕಿದವು. ನೀಟಾಗಿ ಮೆನಿಕ್ಯೂರ್ ಮಾಡಿಸಿದ್ದ ಕೈಬೆರಳ ಉಗುರುಗಳಿಗೆ ನೇರಳೇ ಬಣ್ಣ. ಆತ ಚಕ್ಕೋತದ ಹಣ್ಣು ತಿಂದು ಪ್ರತಿಯೊಂದು ಹೋಳಿನಗಿತಕ್ಕೂ ದಟ್ಟ ತುಟಿರಂಗನ್ನು ಪೇಪರ್ ನ್ಯಾಪ್ಕಿನ್ನಿನಿಂದ ಒರೆಸಿಕೊಳ್ಳುತ್ತಿದ್ದ. ನ್ಯಾಪ್ಕಿನ್, ಕಾಫಿಯ ಲೋಟ, ಅರ್ಧ ತಿಂದ ಹಣ್ಣು ಎಲ್ಲವೂ ಕೆಂಪುಕೆಂಪಾಗಿತ್ತು.

ಅಷ್ಟು ಹತ್ತಿರದಿಂದ ಮಾರಿಸ್‌ನನ್ನು ನಾನು ನೋಡಿಯೇ ಇರಲಿಲ್ಲ. ಮುಖಕ್ಕೆ ಹಾಕಿದ್ದ ದಟ್ಟ ಫೌಂಡೇಶನ್ ಎಷ್ಟೇ ಉಲ್ಟಾ ಶೇವ್ ಮಾಡಿದ್ದರೂ ಗದ್ದದ ಮೇಲಿನ ತರಿತರಿಯನ್ನು ಮುಚ್ಚಿರಲಿಲ್ಲ. ಹಾಕಿದ್ದ ನಕಲಿ ರೆಪ್ಪೆಗೂದಲುಗಳು ಸೆಟೆದು ಆತ ಹಾಕಿದ್ದ ನೈಕಿ ಕನ್ನಡಕದ ದಪ್ಪ ಫ್ರೇಮನ್ನು ಕತ್ತರಿಸಲು ಸಿದ್ಧವಾಗಿದ್ದವು. ನೀಟಾಗಿ ಕತ್ತರಿಸಿದ ಹುಬ್ಬಿಗೂ ತಲೆಗೂದಲಿಗೂ ಒಟ್ಟಿಗೆ ಡೈ ಮಾಡಿಸಿರಲಿಲ್ಲವೇನೋ, ಹುಬ್ಬಿನಲ್ಲಿ ಕೆಲವು ಬಿಳಿಗೂದಲುಗಳು ಹೊರಕಾಣಿಸಿದ್ದರೂ ತಲೆಗೂದಲಿನ ಬಂಗಾರಬಣ್ಣದ ಕೋರೈಸುವಿಕೆಯಲ್ಲಿ ಮಬ್ಬಿದ್ದವು.

ಮಾರಿಸ್ ಯಾವುದನ್ನು ತೆರೆದಿಡಲು ಪ್ರಯತ್ನಿಸುತ್ತಿದ್ದಾನೋ ಅದು ಗಾಢವಾಗಿ ಕಾಣಿಸುತ್ತಿತ್ತು. ಆದರೆ ಮುಚ್ಚಿಡಬೇಕೆಂದು ಪ್ರಯತ್ನಿಸಿದ್ದು ನಿನ್ನಿಂದ ಸಾಧ್ಯವಿಲ್ಲ ಎಂದು ಸವಾಲೆಸೆಯುವಂತೆ ಹಣಿಕಿ ನೋಡುತ್ತಿತ್ತು.

ಇನ್ನೊಮ್ಮೆ ನೇರವಾಗಿ ಆತನ ಮುಖ ನೋಡಿದೆ. ಮತ್ತೊಮ್ಮೆ ಆತನ ಕಣ್ಣು ತನ್ನೆಲ್ಲ ವ್ಯಂಜನಗಳೊಂದಿಗೆ ನನ್ನನ್ನು ನೇರವಾಗಿ ಚುಚ್ಚಿತು. ಅಷ್ಟರಲ್ಲಿ ಮೊದಲ ಲೆಕ್ಚರಿನ ಬೆಲ್ಲು ಹೊಡೆದಿತ್ತು. ನನ್ನ ಕಸಿವಿಸಿಯನ್ನು ನೋಡಿ ಆತ 'ಸೇವ್ಡ್ ಬೈ ದ ಬೆಲ್' ಎಂದು ನಕ್ಕ. ನಾನೂ ನಕ್ಕು ಕಾನ್ಫರೆನ್ಸ್ ಹಾಲಿನ ಒಳಗೆ ಹೋದೆ. ಆತ ಮಧ್ಯಾಹ್ನ ಊಟದ ಸಮಯಕ್ಕೆ ಮೆಸೇಜು ಕಳಿಸುತ್ತೀನಿ, ಲೀಸಾ ಹೊರಗಡೆ ಶಾಪಿಂಗ್ ಹೋಗಿದ್ದಾಳೆ. ಪಾಪ, ಆಕೆಗೆ ರೂಮಲ್ಲಿ ಕೂತು ಬೋರಾಗುತ್ತೆ' ಎಂದ. ನಾನು ತಲೆದೂಗಿಸಿ ಹೃದಯಸ್ತಂಭನವಾದಾಗ ಎದೆಒತ್ತುವ ಹೊಸತಿದಿಯ ಬಗ್ಗೆ ಆಗಿರುವ ಆವಿಷ್ಕಾರದ ಬಗ್ಗೆ ಕೇಳಿಸಿಕೊಳ್ಳಲು ತಯಾರಾದೆ.

★★★

ಮಾರೀಸ್ ನಾನೂ ಎಲ್ಲರೂ ಒಂದೇ ಕಂಪೆನಿಯಲ್ಲಿದ್ದರೂ ಆತ ನಗರದ ಇನ್ನೊಂದು ಆಸ್ಪತ್ರೆಯಲ್ಲಿ ವೈದ್ಯ. ಇಬ್ಬರೂ ವಿಭಾಗದ ಮುಖ್ಯಸ್ಥರುಗಳೇ. ನಾವಿಬ್ಬರೂ ಮೊದಲ ಬಾರಿ ಭೇಟಿಯಾದದ್ದು ದೊಡ್ಡವರು ನಮ್ಮನ್ನು ಎಲ್ಲ ಆಸ್ಪತ್ರೆಗಳ ವಿಭಾಗದ ಮುಖ್ಯಸ್ಥರ ಮೀಟಿಂಗಿಗೆ ಕರೆದಾಗ. ನನ್ನ ಜತೆಗೆ ನಮ್ಮ ಆಸ್ಪತ್ರೆಯ ನರ್ಸಿಂಗ್ ಮ್ಯಾನೇಜರ್ ಶೆರಿಲ್ ಕೂಡ ಬಂದಿದ್ದಳು. ಆಸ್ಪತ್ರೆಯ ಆಯವ್ಯಯ, ಗ್ರಾಹಕರ ಸಮೀಕ್ಷೆ, ಬೇರೆ ವಿಭಾಗಗಳೊಂದಿಗಿನ ನಮ್ಮ ಸಂಬಂಧ ಇತರೇ ಇತರೇ ಆಡಳತೀ ಜಾರ್ಗನುಗಳನ್ನು ಹೇಳಿ ಮುಗಿಸಿ ನನ್ನ ಜಾಗದಲ್ಲಿ ಬಂದು ಕೂತೆ. ನನ್ನ ಪ್ರಸ್ತುತಿ ಬಹಳ ಚೆನ್ನಾಗಿತ್ತೆಂದು ಹೈಫೈ ಕೊಟ್ಟಳು, ಶೆರಿಲ್. ನಂತರ ಬಂದ ವ್ಯಕ್ತಿ ಮಾರಿಸ್ ವಿಲಿಯಮ್ ಎಂದು ಪರಿಚಯಮಾಡಿಸಿಕೊಟ್ಟರು. ಆರಡಿ ಎತ್ತರದ ನೀಳಕೈ, ನೀಳಬೆರಳುಗಳ ವ್ಯಕ್ತಿ. ಫ್ರೆಂಡ್ಸ್ ಟೀವಿ ಶೋದ ರೇಚಲ್ ಹೇರ್‌ಸ್ಟೈಲಿನ ಮುಖಕ್ಕೆ ಅತ್ತಲೂ ಅಲ್ಲದ ಇತ್ತಲೂ ಅಲ್ಲದ ಮೇಕಪ್ಪು ಧರಿಸಿ, ಕಿವಿಗೆರಡು ಹರಳಿರಿಸಿ ನ್ಯೂಯಾರ್ಕ್ ಅಂಡ್ ಕಂಪೆನಿಯ ಮುಕ್ಕಾಲು ತೋಳಿನ ಬ್ಲೌಸು ಧರಿಸಿದ ವ್ಯಕ್ತಿ ಸುಳ್ಳು ಕೀರಲಲ್ಲಿ ತನ್ನಾಸ್ಪತ್ರೆಯ ಬಗ್ಗೆ ಪ್ರೆಸೆಂಟೇಶನ್ ಕೊಟ್ಟ. ಶೆರಿಲ್, ಆತನ ಮಾತು ಮುಗಿಯುವ ತನಕ ನನ್ನ ತೊಡೆಯನ್ನು ಚಿವುಟುತ್ತಳೇ ಇದ್ದಳು. ನಾನು